ನಿಮ್ಮ ಯಶಸ್ಸಿನ ಸೂತ್ರ ಯಾವುದು?

ಪ್ರತಿಯೊಬ್ಬ ಸಾಧಕನ ಮುಂದೆ ಜಗತ್ತು ಇಡುವ ಪ್ರಶ್ನೆಯಿದು. ಈ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ವಿಧದಲ್ಲಿ ಉತ್ತರಿಸಬಹುದು. ಆದರೆ, ಈ ಉತ್ತರಗಳಲ್ಲಿ ಸಾಮಾನ್ಯವಾಗಿರುವ ಕೆಲವು ಸಂಗತಿಗಳಿರುತ್ತವೆ. ಅಂಥ ಎರಡು ಸಂಗತಿಗಳು: ಕಠಿಣ ಶ್ರಮ ಮತ್ತು ಕ್ರಮಬದ್ಧ ಯೋಜನೆ.

ತಮ್ಮ ಸಾಧನೆಗೆ ಅದೃಷ್ಟವನ್ನು ಕಾರಣವನ್ನಾಗಿ ಯಾರೂ ಹೇಳುವುದಿಲ್ಲ. ಅದೃಷ್ಟದ ಕಾರಣದಿಂದಾಗಿ ಯಶಸ್ಸು ಗಳಿಸಿದೆ ಎಂದು ಯಾರಾದರೂ ಹೇಳಿದರೆ, ಆ ಯಶಸ್ಸಿಗೆ ಹೆಚ್ಚಿನ ಮಹತ್ವವೂ ಇರುವುದಿಲ್ಲ. ಹಾಗೆಂದು, ಯಶಸ್ಸಿನಲ್ಲಿ ಅದೃಷ್ಟದ ಪಾತ್ರ ಇರುವುದಿಲ್ಲ ಎಂದರ್ಥವಲ್ಲ. ಆದರೆ, ಶ್ರಮ ಹಾಗೂ ಸಮರ್ಪಕ ಯೋಜನೆಯಿದ್ದಾಗ ಅದೃಷ್ಟವೂ ಜೊತೆಯಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶಗಳು ಪ್ರತಿ ವರ್ಷ ಪ್ರಕಟಗೊಂಡಾಗಲೂ, ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ಸುದ್ದಿಯಾಗುತ್ತಾರೆ. ವಿದ್ಯಾರ್ಥಿ ಜೀವನದಲ್ಲಿ ಸೆಲೆಬ್ರಿಟಿಯಾಗುವ ಅವಕಾಶವನ್ನು ಈ ಫಲಿತಾಂಶಗಳು ಜಾಣ ವಿದ್ಯಾರ್ಥಿಗಳಿಗೆ ಕಲ್ಪಿಸುತ್ತವೆ.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಗೆ, ವಿದ್ಯಾರ್ಥಿ ಜೀವನದಲ್ಲಿ ವಿಶೇಷ ಸ್ಥಾನ ಇರುವುದರಿಂದ ಈ ಪರೀಕ್ಷೆಗಳಲ್ಲಿನ ಯಶಸ್ಸಿಗೆ ಸಮಾಜದಲ್ಲಿ ವಿಶಿಷ್ಟ ಸ್ಥಾನವಿದೆ. ಆ ಕಾರಣದಿಂದಲೇ, ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗುವ ಹುಡುಗ ಅಥವಾ ಹುಡುಗಿ ತಮ್ಮ ಕುಟುಂಬ ಅಥವಾ ಶಾಲೆ ಮಾತ್ರವಲ್ಲ, ಇಡೀ ಊರಿನ ಹಾಗೂ ಸಮುದಾಯದ ಕಣ್ಮಣಿಗಳಾಗಿಬಿಡುತ್ತಾರೆ. ಹಿರಿಯರಿಗೆ ಹೆಮ್ಮೆಯೂ ಕಿರಿಯರಿಗೆ ಸ್ಫೂರ್ತಿ–ಮಾದರಿಯೂ ಆಗಿ ಪರಿಣಮಿಸುತ್ತಾರೆ. ಬಾಗಲಕೋಟೆಯ ಅಂಕಿತಾ ಬಸಪ್ಪ ಕೊಣ್ಣೂರ ಅವರ ಉದಾಹರಣೆ ನೋಡಿ. ಮೊರಾರ್ಜಿ ಶಾಲೆಯಲ್ಲಿ ಓದಿದ ಈ ಬಾಲಕಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೇ ಮೊದಲಿಗಳಾಗಿದ್ದಾಳೆ. ಸರ್ಕಾರಿ ಶಾಲೆಗಳ ಬಗ್ಗೆ ನಕಾರಾತ್ಮಕ ಸಂಗತಿಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ, ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಫಲಿತಾಂಶದಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಕಡಿಮೆ ಸಾಧನೆಯಲ್ಲ. ಅಂಕಿತಾಳ ಸಾಧನೆ ಸರ್ಕಾರಿ ಶಾಲಾವ್ಯವಸ್ಥೆಗೆ ಹೊಸ ಭರವಸೆ ತುಂಬುವ ಫಲಿತಾಂಶವೂ ಹೌದು.

2023–24ರ ಶೈಕ್ಷಣಿಕ ವರ್ಷದ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶಗಳು ಇತ್ತೀಚೆಗಷ್ಟೇ ಪ್ರಕಟಗೊಂಡಿದ್ದು, ಸಾಧಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾಧ್ಯಮಗಳಲ್ಲಿ ಕಂಗೊಳಿಸುತ್ತಿದ್ದಾರೆ. ಇಂಥ ಕೆಲವು ವಿದ್ಯಾರ್ಥಿ ವಿದ್ಯಾರ್ಥಿನಿಯರ ಮುಂದೆ, ನಿಮ್ಮ ಯಶಸ್ಸಿನ ಗುಟ್ಟೇನು ಎನ್ನುವ ಎಂದೂ ಹಳತಾಗದ ಪ್ರಶ್ನೆಯನ್ನೇ 'ಸುಧಾ' ಇರಿಸಿತು. ಆ ಪ್ರಶ್ನೆಗೆ ಉತ್ತರ ರೂಪದ ಪ್ರತಿಕ್ರಿಯೆಗಳು ಕೆಳಗಿವೆ. ವಿದ್ಯಾರ್ಥಿಗಳ ಮಾತುಗಳಲ್ಲೇ ಇರುವ ಈ ಟಿಪ್ಪಣಿಗಳು, ಯುವ ತಲೆಮಾರಿನ ಓದಿನ ಹಸಿವು, ಶಿಸ್ತು ಹಾಗೂ ಕಠಿಣ ಶ್ರಮವನ್ನು ಸೂಚಿಸುವಂತಿವೆ. ಹೊಸ ತಲೆಮಾರಿನ ತವಕ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ದಿಕ್ಸೂಚಿಯ ರೂಪದಲ್ಲಿ ನೋಡಬಹುದಾದ ಈ ಪ್ರತಿಕ್ರಿಯೆಗಳಲ್ಲಿ, ಕನ್ನಡನಾಡಿನ ಸಾಮಾಜಿಕ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವಲ್ಲಿ ಕೆಲವು ಸೂಚನೆಗಳೂ ಇರುವಂತಿವೆ. ■

## ಕನಸೆಂಬುದು ತ್ರಿಕೋನಾಕೃತಿ

**ಎ. ವಿದ್ಯಾಲಕ್ಷ್ಮಿ**
ವಿಜ್ಞಾನ ವಿಭಾಗ, ರಾಜ್ಯಕ್ಕೆ ಮೊದಲ ಸ್ಥಾನ (598 ಅಂಕ), ಇಂಗ್ಲಿಷ್ ಮಾಧ್ಯಮ, ವಿದ್ಯಾನಿಕೇತನ್ ಸೈನ್ಸ್ ಪಿಯು ಕಾಲೇಜು, ಹುಬ್ಬಳ್ಳಿ, ಧಾರವಾಡ



ಪರೀಕ್ಷೆಗಾಗಿ ಟ್ಯೂಷನ್ ತೆಗೆದುಕೊಳ್ಳಲಿಲ್ಲ. ಮನೆಯಲ್ಲೇ ನಾನು ಓದುತ್ತಿದ್ದೆ. ಕಾಲೇಜಿನಲ್ಲಿ ವಾರದಲ್ಲಿ ಎರಡು ಬಾರಿ ಟೆಸ್ಟ್‌ಗಳನ್ನು ಮಾಡುತ್ತಿದ್ದರು. ಎಲ್ಲ ಟೆಸ್ಟ್‌ಗಳಿಗೂ ಅಟೆಂಡ್ ಮಾಡುತ್ತಿದ್ದೆ. ನಿತ್ಯ 3ರಿಂದ 4 ಗಂಟೆ ಮಾತ್ರ ಓದಲು ಅವಕಾಶ ಸಿಗುತ್ತಿತ್ತು. ಭಾನುವಾರ ಮಾತ್ರ 15 ಗಂಟೆ ಅಧ್ಯಯನ ಮಾಡುವ ಪ್ಲಾನ್ ಮಾಡುತ್ತಿದ್ದೆ. ಭಾಷಾ ಪತ್ರಿಕೆಗಳಿಗೆ ಪಠ್ಯದ ಜೊತೆ ಗೈಡ್‌ಗಳನ್ನೂ ಓದಿದ್ದೆ. ಪಿಸಿಎಂಬಿ ವಿಷಯಗಳಿಗೆ ನಿಗದಿತ ಪಠ್ಯವನ್ನು ಮಾತ್ರ ಓದುತ್ತಿದ್ದೆ. ಅದನ್ನು ಬಿಟ್ಟರೆ ನಮ್ಮ ಕಾಲೇಜಿನಲ್ಲಿ ಕೊಡುತ್ತಿದ್ದ ಅಧ್ಯಯನ ಸಲಕರಣೆಗಳನ್ನು ಬಳಸುತ್ತಿದ್ದೆ.

ನನ್ನ ಓದಿನಲ್ಲಿ ಏನಾದರೂ ಅನುಮಾನಗಳು ಕಾಡಿದರೆ ಅದನ್ನು ನಮ್ಮ ಅಧ್ಯಾಪಕರು ಬಗೆಹರಿಸುತ್ತಿದ್ದರು. ಅವರೇ ನಮ್ಮ ತರಗತಿಗೆ ಬಂದು 'ಏನಾದರೂ ಡೌಟ್ಸ್ ಇದೆಯಾ' ಎಂದು ಕೇಳುತ್ತಿದ್ದರು. ಹಾಗಾಗಿ ನಮ್ಮ ಪರೀಕ್ಷಾ ಸಿದ್ಧತೆಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ. ನಮ್ಮ ಪೋಷಕರೂ ಪ್ರೋತ್ಸಾಹ ನೀಡುತ್ತಿದ್ದರು. ನನ್ನ ಅಗತ್ಯಗಳಿಗೆ ಸ್ಪಂದಿಸುತ್ತಿದ್ದರು.

ಕಾಲೇಜಿನಲ್ಲಿಯೇ ಆ ದಿನದ ಓದನ್ನು ಮುಗಿಸಿಕೊಂಡು ಬರುತ್ತಿದ್ದೆ. ಮನೆಯಲ್ಲಿ ಅದನ್ನು ಪುನರಾವರ್ತನೆ ಮಾಡುತ್ತಿದ್ದೆ.

ಓದುವಾಗ ಬೋರ್ ಹೊಡೆದರೆ, ಕುಟುಂಬದವರ ಜೊತೆ ಕಾಲ ಕಳೆಯುತ್ತಿದ್ದೆ. ನಿತ್ಯ ವಾಕ್ ಹೋಗುತ್ತಿದ್ದೆ. ನ್ಯೂಸ್ ಪೇಪರ್ ಓದುತ್ತಿದ್ದೆ. ನನ್ನ ತಮ್ಮನ ಜೊತೆ ಬ್ಯಾಡ್ಮಿಂಟನ್ ಆಡಿದ್ದೆ, ಅದು ನನಗೆ ಇಷ್ಟ ಕೂಡ.

ಟೀವಿ ನೋಡುತ್ತಿದ್ದುದು ತುಂಬ ಕಡಿಮೆ. ಬೋರ್ಡ್ ಪರೀಕ್ಷೆಗೆ ಸಿದ್ಧತೆಯನ್ನು ಆರಂಭದಿಂದಲೇ ಮಾಡಬೇಕು. ಕೊನೆಯ ಕ್ಷಣದ ತನಕ ಕಾಯಬಾರದು. ವಿಜ್ಞಾನದಲ್ಲಿ ಓದಿನ ನಿರಂತರತೆ ಹೆಚ್ಚು ಮುಖ್ಯ. ಮತ್ತೆ ಮತ್ತೆ ಪ್ರಾಕ್ಟೀಸ್ ಮಾಡುವುದು ಪ್ರಯೋಜನಕಾರಿ. ಎಷ್ಟು ಟೆಸ್ಟ್‌ಗಳನ್ನು ಬರೆಯಲು ಸಾಧ್ಯವೋ ಅಷ್ಟು ಟೆಸ್ಟ್‌ಗಳನ್ನು ಬರೆಯಬೇಕು.

ಪಿಸಿಎಂಬಿಯಲ್ಲಿ ಒಳ್ಳೆಯ ಅಂಕಗಳು ಬರುತ್ತವೆ ಎಂದು ನಿರೀಕ್ಷೆ ಮಾಡಿದ್ದೆ. ಭಾಷಾ ಪತ್ರಿಕೆಯಲ್ಲಿ ಅಷ್ಟು ಭರವಸೆ ಇರಲಿಲ್ಲ. ಆದರೆ ಅದೂ ಕೈಹಿಡಿದಿದೆ. ನನಗೆ ಡಾಕ್ಟರ್ ಆಗಬೇಕು ಎನ್ನುವುದು ಕನಸು. ಅಪ್ಪನಿಗೆ ಯುಪಿಎಸ್‌ಸಿ ಮಾಡಿಸುವ ಆಸೆ. ಅಮ್ಮ ನಾನು ವಿಜ್ಞಾನಿ ಆಗಬೇಕೆಂದು ಬಯಸುತ್ತಾರೆ. ನನ್ನ ಕನಸು ತ್ರಿಕೋನ ಮಾರ್ಗದಲ್ಲಿದೆ.

ತಂದೆ ಎಸ್. ಅಖಿಲೇಶ್ವರನ್, ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ಅಮ್ಮ ಎ. ಕೃತಿಗ, ಗೃಹಿಣಿ.

## ಕಲಿಕೆಯೆಲ್ಲವೂ ಕಥೆಯಾಗಲಿ...

**ಜ್ಞಾನವಿ ಎಂ.**
ವಾಣಿಜ್ಯ ವಿಭಾಗ, ರಾಜ್ಯಕ್ಕೆ ಮೊದಲ ಸ್ಥಾನ (597 ಅಂಕ), ಇಂಗ್ಲಿಷ್ ಮಾಧ್ಯಮ, ವಿದ್ಯಾನಿಧಿ ಸ್ವತಂತ್ರ ಪದವಿಪೂರ್ವ ಕಾಲೇಜು, ತುಮಕೂರು

ಏನಾದರೂ ಕಲಿಯುತ್ತಿದ್ದೇವೆ ಎಂದರೆ, ಆ ವಿಷಯಕ್ಕೆ ಸಂಬಂಧಿಸಿದಂತೆ ನಾವೊಂದು ಕಥೆಯನ್ನು ಕಲ್ಪಿಸಿಕೊಳ್ಳಬೇಕು. ಆ ಕಥೆಯನ್ನು ನಮ್ಮ ಮಾತೃಭಾಷೆಯಲ್ಲಿ ವಿಸ್ತರಿಸಿಕೊಳ್ಳಬೇಕು. ನಮ್ಮ ನೆನಪಿಗೆ ಅನುಕೂಲ ಆಗುವಂತೆ ಶಾರ್ಟ್‌ಕಟ್ ಸೂತ್ರವನ್ನು ಅಳವಡಿಸಿಕೊಳ್ಳಬೇಕು. ಈ ಕಥನ ಕಲ್ಪನೆಯೇ ನನ್ನ ಯಶಸ್ಸಿನ ಕೀಲಿಕೈ.